# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 125 (242) |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | 28.01.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಜೂನ್ 2019 ರಿಂದ ಜನವರಿ 2022ರ ನಡುವೆ ಮಹದೇವಪುರ ಮತ್ತು ನೆಲಮಂಗಲದ ಉಪನೋಂದಣಿ ಕಚೇರಿಗಳಲ್ಲಿ ಕರ್ನಾಟಕ ಮುದ್ರಾಂಕ ಅಧಿನಿಯಮ ಕಲಂ 5(F) ಮತ್ತು 1908ರ ಅಧಿನಿಯಮ ಕಲಂ III(a) ಪ್ರಕಾರ GDA ನೋಂದಣಿ ಮಾಡದಿರುವುದರಿಂದ ನೋಂದಣಿ ಸುಂಕ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. ವಿವರ ಈ ಕೆಳಕಂಡಂತಿದೆ.<br><br>1) ಮಹದೇವಪುರ ಉಪನೋಂದಣಿ ಕಛೇರಿಯಲ್ಲಿ ಸ್ವಾಧೀನ ಸಹಿತ ಕ್ರಯದ ಕರಾರು ದಸ್ತಾವೇಜು ಸಂಖ್ಯೆ: 8179/18-19 ರಂತೆ ದಿನಾಂಕ: 31.10.2018 ರಂದು ನೋಂದಣಿಯಾಗಿದ್ದು, ಇದನ್ನು ಜಂಟಿ ಅಭಿವೃದ್ಧಿ ಕರಾರು ಎಂದು ವರ್ಗೀಕರಿಸದೆ ನೋಂದಾಯಿಸಿರುವುದರಿಂದ ರೂ.13,80,050/- ಕೊರತೆ ಶುಲ್ಕ ಉಂಟಾಗಿರುತ್ತದೆ ಎಂದು ಮಹಾಲೇಖಪಾಲರು ಆಕ್ಷೇಪಿಸಿರುತ್ತಾರೆ.<br><br>ಶಿವಾಜಿನಗರ ಜಿಲ್ಲಾ ನೋಂದಣಾಧಿಕಾರಿಗಳು ಸದರಿ ದಸ್ತಾವೇಜಿನ ಸಂಬಂಧ ಆಕ್ಷೇಪಣೆಯನ್ನು ಪರಿಶೀಲಿಸಲು ಕರ್ನಾಟಕ ಮುದ್ರಾಂಕ ಕಾಯ್ದೆ, 1957ರ ಕಲಂ 46-A ಮತ್ತು ನೋಂದಣಿ ಕಾಯ್ದೆ, 1908ರ ಕಲಂ 80-A ರಡಿ ಪ್ರಕರಣವನ್ನು ದಾಖಲಿಸಿಕೊಂಡು, ಆದೇಶ ಸಂಖ್ಯೆ:SJN/MDP/ 46A/15/2022-23/1871 ರನ್ವಯ ದಿನಾಂಕ:11.09.2023 ರಂದು ರೂ.23,81,675/- ಗಳಷ್ಟು ಕೊರತೆ ಶುಲ್ಕವನ್ನು ಪಾವತಿಸಲು ಆದೇಶಿಸಿರುತ್ತಾರೆ.<br><br>2) ನೆಲಮಂಗಲ ಉಪನೋಂದಣಿ ಕಛೇರಿಯಲ್ಲಿ ಸ್ವಾಧೀನ ಸಹಿತ ಕ್ರಯದ ಕರಾರು ದಸ್ತಾವೇಜು ಸಂಖ್ಯೆ:2675/18-19 ರಂತೆ ದಿನಾಂಕ: 21.06.2018 ರಂದು ನೋಂದಣಿಯಾಗಿದ್ದು, ಇದನ್ನು ಜಂಟಿ ಅಭಿವೃದ್ಧಿ ಕರಾರು ಎಂದು ವರ್ಗೀಕರಿಸದೆ ನೋಂದಾಯಿಸಿರುವುದರಿಂದ ರೂ.1,34,19,978/- ಕೊರತೆ ಶುಲ್ಕ ಉಂಟಾಗಿರುತ್ತದೆ ಎಂದು ಮಹಾಲೇಖಪಾಲರು ಆಕ್ಷೇಪಿಸಿರುತ್ತಾರೆ.<br><br>ಬೆಂಗಳೂರು ಗ್ರಾಮಾಂತರ ಜಿಲ್ಲಾ ನೋಂದಣಾಧಿಕಾರಿಗಳು ಸದರಿ ದಸ್ತಾವೇಜಿನ ಸಂಬಂಧ ಆಕ್ಷೇಪಣೆಯನ್ನು ಪರಿಶೀಲಿಸಲು ಕರ್ನಾಟಕ ಮುದ್ರಾಂಕ ಕಾಯ್ದೆ, 1957ರ ಕಲಂ 46-A ಮತ್ತು ನೋಂದಣಿ |

| | | |
|---|---|---|
| | | ಕಾಯ್ದೆ, 1908ರ ಕಲಂ 80-A ರಡಿ ಪ್ರಕರಣವನ್ನು ದಾಖಲಿಸಿಕೊಂಡು, ಆದೇಶ ಸಂಖ್ಯೆ: DR.BLR.RURAL/46A & 80A/NEL/06/19-20 ರನ್ವಯ ದಿನಾಂಕ:07.01.2022 ರಂದು ರೂ.1200/- ಗಳಷ್ಟು ಕೊರತೆ ಶುಲ್ಕವನ್ನು ಪಾವತಿಸಲು ಆದೇಶಿಸಿರುತ್ತಾರೆ.<br><br>ಸದರಿ ಮೊತ್ತ ರೂ.1,200/- ಗಳನ್ನು ಪಕ್ಷಕಾರರಿಂದ ಚಲನ್ ಸಂಖ್ಯೆ: CR0122003000633823. ರನ್ವಯ ದಿನಾಂಕ: 27.01.2022 ರಂದು ಮತ್ತು ರಶೀದಿ ಸಂಖ್ಯೆ: 220, ದಿನಾಂಕ:31.01.2022 ರನ್ವಯ ಜಿಲ್ಲಾ ನೋಂದಣಾಧಿಕಾರಿ, ಬೆಂಗಳೂರು ಗ್ರಾಮಾಂತರ ರವರು ವಸೂಲಾಯಿಸಲಾಗಿದೆ. |
| ಆ | ಈ ರೀತಿಯಲ್ಲಿ ತಪ್ಪಾಗಿ ನೋಂದಣಿ ಪ್ರಕ್ರಿಯೆ ನಡೆಸಿರುವುದರಿಂದ ಸರ್ಕಾರಕ್ಕೆ ರೂ.1.48 ಕೋಟಿಯ ಮುದ್ರಾಂಕ ಶುಲ್ಕ ನಷ್ಟವಾಗಿದ್ದು, ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಿದೆ; ಸದರಿ ಉಪನೋಂದಣಾಧಿಕಾರಿಗಳ ಮೇಲೆ ಅಗತ್ಯ ಶಿಸ್ತು ಕ್ರಮ ಕೈಗೊಂಡು ಅಮಾನತ್ತು ಮಾಡಲಾಗುವುದೇ; | ಮಹದೇವಪುರ ಉಪನೋಂದಣಿ ಕಛೇರಿಯಲ್ಲಿ ನೋಂದಣಿಯಾಗಿರುವ ದಸ್ತಾವೇಜಿಗೆ ಸಂಬಂಧಿಸಿದಂತೆ ನೋಂದಣಿ ಮಾಡಿರುವ ಉಪನೋಂದಣಾಧಿಕಾರಿಗಳಿಗೆ ಸಂಬಂಧಪಟ್ಟ ಜಿಲ್ಲಾ ನೋಂದಣಾಧಿಕಾರಿಗಳು ಕಾರಣ ಕೇಳುವ ನೋಟಿಸ್‌ನ್ನು ನೀಡಿದ್ದು, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ. |
| ಇ | ಸರ್ಕಾರಕ್ಕೆ ರೂ.1.48 ಕೋಟಿಯ ಮುದ್ರಾಂಕ ಶುಲ್ಕ ನಷ್ಟವಾಗಿದ್ದು, ಈ ಮೊತ್ತವನ್ನು ಸಂಬಂಧಿಸಿದ ಉಪನೋಂದಣಾಧಿಕಾರಿಯಿಂದಲೇ ವಸೂಲಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; | ಸಂಬಂಧಪಟ್ಟ ಜಿಲ್ಲಾನೋಂದಣಾಧಿಕಾರಿಗಳು ಹೊರಡಿಸಿರುವ ಆದೇಶಗಳಂತೆ ಸದರಿ 2 ಪ್ರಕರಣಗಳಿಂದ ರೂ.23,82,875/- ಕೊರತೆ ಶುಲ್ಕಗಳು ಉಂಟಾಗಿದ್ದು, ಸದರಿ ಶುಲ್ಕಗಳನ್ನು ಸಂಬಂಧಪಟ್ಟ ಪಕ್ಷಕಾರರು ಭರಿಸುವಂತೆ ಆದೇಶಿಸಲಾಗಿದೆ. |
| ಈ | ನವೆಂಬರ್ 2021ರಲ್ಲಿ ರಾಜಾಜಿನಗರ ನೋಂದಣಾಧಿಕಾರಿಯವರು ನಿಯಮಾನುಸಾರ ನೋಂದಣಿ ಮಾಡದಿರುವುದರಿಂದ ರೂ.1.32 ಕೋಟಿ ನಷ್ಟವಾಗಿದ್ದು ಈ ನಷ್ಟವನ್ನು ಸಂಬಂಧಿತ ಅಧಿಕಾರಿಯಿಂದಲೇ ವಸೂಲು ಮಾಡಲು ಕ್ರಮ ಕೈಗೊಳ್ಳಲಾಗುವುದೇ? | ಮೂರು ಪ್ರಕರಣಗಳಿಂದ ರೂ.1.32 ಕೋಟಿ ಕೊರತೆ ಶುಲ್ಕ ಉಂಟಾಗಿದ್ದು, ಕೆಳಕಂಡ ವಿವರಗಳಂತೆ ಸದರಿ ಪ್ರಕರಣಗಳಲ್ಲಿ ಕೊರತೆ ಶುಲ್ಕಗಳನ್ನು ವಸೂಲಾಯಿಸಲಾಗಿದೆ.<br><br>1) ರಾಜಾಜಿನಗರ ಜಿಲ್ಲಾ ನೋಂದಣಾಧಿಕಾರಿ ಕಛೇರಿಯಲ್ಲಿ Company Petition No: CP(CAA) No:1618/BB/2020 ದಿನಾಂಕ:20.11.2020 / 30.01.2021 ರಲ್ಲಿ ಹೆಚ್ಚುವರಿ ಮುದ್ರಾಂಕ ಶುಲ್ಕ (Cess duty) ವನ್ನು ಆಕರಿಸದೇ ಇರುವುದರಿಂದ ರೂ.37,71,521/- ಕೊರತೆ ಶುಲ್ಕ ಉಂಟಾಗಿರುತ್ತದೆ ಎಂದು ಮಹಾಲೇಖಪಾಲರು ಆಕ್ಷೇಪಿಸಿರುತ್ತಾರೆ.<br><br>ಸದರಿ ಕೊರತೆ ಶುಲ್ಕ ರೂ.37,71,521/- ಗಳನ್ನು ಪಕ್ಷಕಾರರಿಂದ ಚಲನ್ ಸಂಖ್ಯೆ: CR0422003000515252 |

| | | |
|---|---|---|
| | | ರನ್ವಯ ದಿನಾಂಕ: 25.04.2022 ಮತ್ತು ರಶೀದಿ ಸಂಖ್ಯೆ:210 ರನ್ವಯ ದಿನಾಂಕ:26.04.2022 ರಲ್ಲಿ ಜಿಲ್ಲಾ ನೋಂದಣಾಧಿಕಾರಿ, ರಾಜಾಜಿನಗರ ರವರು ವಸೂಲಾಯಿಸಿರುತ್ತಾರೆ.<br><br>2) ರಾಜಾಜಿನಗರ ಜಿಲ್ಲಾ ನೋಂದಣಾಧಿಕಾರಿ ಕಛೇರಿಯಲ್ಲಿ Company Petition No: CP (CAA) No: 41/BB/2019 ದಿನಾಂಕ: 27.11.2019/ 16.01.2021 ರೂ.88,84,810/- ರಲ್ಲಿ ಹೆಚ್ಚುವರಿ ಮುದ್ರಾಂಕ ಶುಲ್ಕ (Cess duty) ವನ್ನು ಆಕರಿಸದೇ ಇರುವುದರಿಂದ ರೂ.88,84,810/- ಕೊರತೆ ಶುಲ್ಕ ಉಂಟಾಗಿರುತ್ತದೆ ಎಂದು ಮಹಾಲೇಖಪಾಲರು ಆಕ್ಷೇಪಿಸಿರುತ್ತಾರೆ.<br><br>ಸದರಿ ಕೊರತೆ ಶುಲ್ಕ ರೂ. ರೂ.88,84,810/- ಗಳನ್ನು ಪಕ್ಷಕಾರರಿಂದ ಇ-ಸ್ಟಾಂಪ್ ಸಂಖ್ಯೆ: IN-KA383105 66020164U, ದಿನಾಂಕ:07.06.2022 ರನ್ವಯ ಜಿಲ್ಲಾ ನೋಂದಣಾಧಿಕಾರಿ, ರಾಜಾಜಿನಗರ ರವರು ವಸೂಲಾಯಿಸಿರುತ್ತಾರೆ.<br><br>3) ರಾಜಾಜಿನಗರ ಜಿಲ್ಲಾ ನೋಂದಣಾಧಿಕಾರಿ ಕಛೇರಿಯಲ್ಲಿ Company Petition No: CP (CAA)No:25/ Chd/Hry/2018, ದಿನಾಂಕ: 20.05.2019 /22.12.2020 ರಲ್ಲಿ ಹೆಚ್ಚುವರಿ ಮುದ್ರಾಂಕ ಶುಲ್ಕ (Cess duty) ವನ್ನು ಆಕರಿಸದೇ ಇರುವುದರಿಂದ ರೂ.5,18,712/- ಕೊರತೆ ಶುಲ್ಕ ಉಂಟಾಗಿರುತ್ತದೆ ಎಂದು ಮಹಾಲೇಖಪಾಲರು ಆಕ್ಷೇಪಿಸಿರುತ್ತಾರೆ.<br><br>ಸದರಿ ಕೊರತೆ ಶುಲ್ಕ ರೂ.5,18,712/- ಗಳನ್ನು ಪಕ್ಷಕಾರರಿಂದ ಚಲನ್ ಸಂಖ್ಯೆ: CR0423003001601506 ರನ್ವಯ ದಿನಾಂಕ: 24.04.2023 ರಲ್ಲಿ ಜಿಲ್ಲಾ ನೋಂದಣಾಧಿಕಾರಿ, ರಾಜಾಜಿನಗರ ರವರು ವಸೂಲಾಯಿಸಿರುತ್ತಾರೆ.<br><br>ಸದರಿ 3 ಪ್ರಕರಣಗಳಿಂದ ಉಂಟಾಗಿದ್ದ ಕೊರತೆ ಶುಲ್ಕ ರೂ.1,31,75,043/-ಗಳನ್ನು ವಸೂಲಾಯಿಸಿ ಸರ್ಕಾರಕ್ಕೆ ಜಮೆ ಮಾಡಲಾಗಿದೆ. |

ಕಂಇ/30/ಎಂಎನ್‌ಎಸ್‌ಎ/2026

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು